

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫತೂಹ್'** ಮಸೀದಿಯಲ್ಲಿ **29-11-2019** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಯಝೀದ್ ಬಿನ್ ಸಾಬಿತ್[ರ] ಒಬ್ಬ ಬದರೀ ಸಹಾಬಿ ಆಗಿದ್ದರು. ಅವರು ಅನ್‌ಸಾರ್‌ಗಳ ಖಝ್ರಜ್ ಗೋತ್ರದ ಬನೂ ಮಾಲಿಕ್ ಬಿನ್ ನಜ್ಜಾರ್ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರು ಹಝ್ರತ್ ಝೈದ್ ಬಿನ್ ಸಾಬಿತರ ಅಣ್ಣನಾಗಿದ್ದರು. ಹಝ್ರತ್ ಯಝೀದ್ ಬಿನ್ ಸಾಬಿತ್ ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಹಿಜರಿ ವರ್ಷ 12ರಲ್ಲಿ ಹಝ್ರತ್ ಅಬೂಬಕರ್[ರ]ರವರ ಖಿಲಾಫತ್ ಕಾಲದಲ್ಲಿ ಯಮಾಮ ಯುದ್ಧದಲ್ಲಿ ಭಾಗವಹಿಸಿ ಶಹೀದರಾದರು.

ಹಝ್ರತ್ ಯಝೀದ್ ಬಿನ್ ಸಾಬಿತ್ ವರದಿ ಮಾಡುತ್ತಾರೆ: ಒಮ್ಮೆ ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಯಲ್ಲಿ ಸಹಾಬರ ಜೊತೆ ಕುಳಿತಿದ್ದಾಗ ಒಂದು ಜನಾಝವನ್ನು ಕಂಡೆವು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಜನಾಝ ಕಂಡ ಕೂಡಲೇ ಎದ್ದು ನಿಂತರು. ಅವರ ಸಹಾಬರೂ ಎದ್ದು ನಿಂತರು. ಆ ಜನಾಝ ಅವರ ಎದುರಿನಿಂದ ದಾಟಿ ಹೋಗುವ ತನಕ ಅವರೆಲ್ಲರೂ ನಿಂತಿದ್ದರು. ಅಲ್ಲಾಹನಾಣೆ! ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎದ್ದು ನಿಂತದ್ದು ಅಲ್ಲಿ ಕುಳಿತಿರಲು ಸ್ಥಳವಕಾಶ ಇಲ್ಲದಿರುವುದರಿಂದಲೋ ಅಲ್ಲಿ ಕುಳಿತಿರಲು ಕಷ್ಟವಾದ ಕಾರಣದಿಂದಲೋ ಅಲ್ಲ. ಆ ಜನಾಝ ಒಬ್ಬ ಯಹೂದಿ ಪುರುಷನ ಅಥವಾ ಸ್ತ್ರೀಯದು ಆಗಿರಬಹುದು.

ಹಝ್ರತ್ ಯಝೀದ್ ಬಿನ್ ಸಾಬಿತರ ಇನ್ನೊಂದು ವರದಿ ಹೀಗಿದೆ: ನಾವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ಹೋಗುತ್ತಿದ್ದಾಗ ಒಂದು ಹೊಸ ಗೋರಿಯನ್ನು ಕಂಡೆವು. ಆಗ ಅದು ಯಾರ ಗೋರಿ ಎಂದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದಾಗ ಜನರು ಹೇಳಿದರು: ಅದು ಇಂತಿಂತಹ ಗೋತ್ರದವರ ಒಬ್ಬ ದಾಸಿಯ ಗೋರಿ ಆಗಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಆ ದಾಸಿ ಯಾರೆಂದು ತಿಳಿಯಿತು. ಸಹಾಬರು ಹೇಳಿದರು: ಆಕೆ ಮಧ್ಯಾಹ್ನ ಮೃತಳಾದಾಗ ತಾವು ಮಧ್ಯಾಹ್ನದ ನಿದ್ರೆಯಲ್ಲಿದ್ದಿರಿ. ತಾವು ವಿಶ್ರಾಂತಿ ಪಡೆಯುತ್ತಿದ್ದುದರಿಂದ ನಿಮ್ಮನ್ನು ಎಬ್ಬಿಸಲು ನಾವು ಬಯಸಲಿಲ್ಲ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಎದ್ದು ನಿಂತು ತನ್ನ ಹಿಂದೆ ಜನರನ್ನು ಸಾಲಾಗಿ ನಿಲ್ಲಿಸಿ ನಾಲ್ಕು ತಕ್‌ಬೀರ್ ಉಚ್ಛರಿಸಿದರು. ಎಂದರೆ ಅವರು ನಮಾಝೆ ಜನಾಝ ನಿರ್ವಹಿಸಿದರು. ಅನಂತರ ಹೀಗೆ ಹೇಳಿದರು: ನಾನು ನಿಮ್ಮ ಮಧ್ಯೆ ಇರುವ ತನಕ ನಿಮ್ಮ ಪೈಕಿ ಯಾರು ಮೃತರಾದರೂ ಅದರ ಸಮಾಚಾರ ನನಗೆ ತಿಳಿಸಬೇಕು. ಏಕೆಂದರೆ ನಿಶ್ಚಯವಾಗಿಯೂ ನನ್ನ ಪ್ರಾರ್ಥನೆ ಮೃತ ವ್ಯಕ್ತಿಗೆ ಅನುಗ್ರಹದಾಯಕವಾಗುವುದು.

ಇನ್ನೊಬ್ಬ ಸಹಾಬಿಯ ಹೆಸರು ಮಊದ್ ಬಿನ್ ಅಮರ್ ಬಿನ್ ಜಮೂಹ್[ರ]. ಅವರು ಅನ್‌ಸಾರ್‌ಗಳ ಖಝ್ರಜ್ ಗೋತ್ರದ ಬನೂ ಜಶಮ್ ಕುಟುಂಬಕ್ಕೆ ಸೇರಿದ್ದರು. ಅವರ ಪಿತನ ಹೆಸರು ಅಮರ್ ಬಿನ್ ಜಮೂಹ್. ಅವರ ತಾಯಿಯ ಹೆಸರು ಹಿಂದ್ ಬಿನ್ತ್ ಅಮರ್. ಅವರು ತನ್ನ ಸಹೋದರರಾದ ಹಝ್ರತ್ ಮುಆಝ್ ಮತ್ತು ಹಝ್ರತ್ ಖಲ್ಲಾದ್ ಜೊತೆ ಸೇರಿ ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು. ಅವರ ಪಿತ ಅಮರ್ ಬಿನ್ ಜಮೂಹ್‌ರವರ ಕಾಲು ಕುಂಟಾದ ಕಾರಣದಿಂದ ಅವರ ಮಕ್ಕಳು ಅವರನ್ನು ಬದರ್ ಯುದ್ಧದಲ್ಲಿ ಭಾಗವಹಿಸಲು ಬಿಡಲಿಲ್ಲ. ಆದರೆ ಉಹುದ್ ಸಂದರ್ಭದಲ್ಲಿ ಹಝ್ರತ್ ಅಮರ್ ಬಿನ್ ಜಮೂಹ್ ಮಕ್ಕಳೊಂದಿಗೆ ಹೇಳಿದರು: ಬದರ್ ಯುದ್ಧದಲ್ಲಿ ಭಾಗವಹಿಸಲು ನೀವು ನನ್ನನ್ನು ಬಿಡಲಿಲ್ಲ. ಆದರೆ ನೀವು ನನ್ನನ್ನು ಈ ಯುದ್ಧದಲ್ಲಿ ಭಾಗವಹಿಸುವುದರಿಂದ ತಡೆಯಲಾರಿರಿ. ಅವರ ಮಕ್ಕಳು ಹಲವು ಸಾರಿ ಹೇಳಿದರು: ನಿಮ್ಮ ಕಾಲುಗಳಲ್ಲಿ ನ್ಯೂನತೆ ಇದೆ. ನಿಮಗೆ ಯುದ್ಧ ಮಾಡುವುದು ಫರ್ಝ್ ಅಲ್ಲ. ಆದರೆ ಹಝ್ರತ್ ಅಮರ್ ಅವರ ಮಾತನ್ನು ಅಂಗೀಕರಿಸಲಿಲ್ಲ. ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ವಿನಂತಿಸಿದರು: ನನ್ನ ಮಕ್ಕಳು ನನ್ನ ಕಾಲುಗಳ ವಿಕಲತೆ ಕಾರಣದಿಂದ ನನ್ನನ್ನು ಯುದ್ಧದಿಂದ ತಡೆಯುತ್ತಿದ್ದಾರೆ. ಆದರೆ ನಾನು ತಮ್ಮೊಂದಿಗೆ ಜಿಹಾದ್‌ನಲ್ಲಿ ಭಾಗವಹಿಸಲು ಇಚ್ಛಿಸುತ್ತೇನೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸಹ ಹೇಳಿದರು: ನಿಮಗೆ ಅಲ್ಲಾಹನು ಯುದ್ಧ ಮಾಡುವುದರಿಂದ ವಿನಾಯಿತಿ ನೀಡಿರುವನು. ನಿಮಗೆ ಜಿಹಾದ್ ಫರ್ಝ್ ಅಲ್ಲ. ಆದರೆ ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಸಮರೋತ್ಸಾಹವನ್ನು ಕಂಡು ಅನುಮತಿ ನೀಡಿದರು. ಹಝ್ರತ್ ಅಮರ್ ತನ್ನ ಆಯುಧಗಳನ್ನು ಎತ್ತಿಕೊಂಡು ಹೊರಟಾಗ ಹೀಗೆ ಹೇಳಿದರು: ಓ ಅಲ್ಲಾಹ್ ನನಗೆ ಶಹಾದತ್ ನೀಡು. ನನ್ನನ್ನು ಸೋತವನಾಗಿ ನನ್ನ ಕುಟುಂಬದ ಕಡೆಗೆ ಮರಳಿಸಬೇಡ. ಅನಂತರ ಅವರ ಆಶೆ ಈಡೇರಿತು. ಉಹುದ್ ಯುದ್ಧದಲ್ಲಿ ಅವರು ಶಹೀದರಾದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

ಹೇಳಿದರು: ನನ್ನ ಜೀವ ಯಾರ ಕೈಯಲ್ಲಿದೆಯೋ ಅವನ ಹೆಸರಲ್ಲಿ ಪ್ರಮಾಣ ಮಾಡಿ ಹೇಳುತ್ತೇನೆ. ನಾನು ಅಮರ್‌ರನ್ನು ಸ್ವರ್ಗದಲ್ಲಿ ಕುಂಟುತ್ತಾ ನಡೆಯುವುದನ್ನು ಕಂಡೆನು.

ಇನ್ನೊಬ್ಬ ಸಹಾಬಿಯ ಹೆಸರು ಹಝ್ರತ್ ಬಿಶರ್ ಬಿನ್ ಬರಾ ಬಿನ್ ಮಅ್‌ರೂರ್[ರ]. ಅವರು ಅನ್‌ಸಾರ್‌ಗಳ ಖಝ್ರಜ್ ಗೋತ್ರದ ಬನೂ ಉಬೈದ ಬಿನ್ ಅದೀ ಕುಟುಂಬಕ್ಕೆ ಸೇರಿದವರಾಗಿದ್ದರು. ಇನ್ನೊಂದು ವರದಿ ಪ್ರಕಾರ ಅವರು ಬನೂ ಸಲ್ಮಾ ಕುಟುಂಬದವರಾಗಿದ್ದರು. ಅವರ ಪಿತನ ಹೆಸರು ಹಝ್ರತ್ ಬರಾ ಬಿನ್ ಮಅ್‌ರೂರ್. ಮಾತೆಯ ಹೆಸರು ಖುಲೈದ ಬಿನ್ತ್ ಖೈಸ್. ಹಝ್ರತ್ ಬರಾ ಬಿನ್ ಮಅ್‌ರೂರ್ ನೇಮಿಸಲ್ಪಟ್ಟ ಹನ್ನೆರಡು ನಖೀಬ್ (ಮುಖಂಡ)ರಲ್ಲಿ ಒಬ್ಬರಾಗಿದ್ದರು. ಅವರು ಬನೂ ಸಲ್ಮಾ ಗೋತ್ರದ ನಖೀಬ್ ಆಗಿದ್ದರು. ಹಝ್ರತ್ ಬಿಶರ್ ತನ್ನ ತಂದೆಯರೊಂದಿಗೆ ಬೈಅತ್ ಅಖಬ ಸಾನಿಯದಲ್ಲಿ ಭಾಗವಹಿಸಿದ್ದರು. ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿಪುಣ ಬಿಲ್ಲುಗಾರರಲ್ಲಿ ಒಬ್ಬರಾಗಿದ್ದರು. ಅವರು ಬದರ್, ಉಹುದ್, ಖಂದಕ್, ಹುದೈಬಿಯಾ ಸಂಧಿ, ಖೈಬರ್ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗವಹಿಸಿದ್ದರು.

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಅಬ್ದುಲ್ಲಾ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೇಳಿದರು: ಓ ಬನೂ ಸಲ್ಮಾ ಗೋತ್ರದವರೇ ನಿಮ್ಮ ಮುಖಂಡ ಯಾರು? ಅವರು ಹೇಳಿದರು: ಜದ್ದ್ ಬಿನ್ ಖೈಸ್. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೇಳಿದರು: ನೀವು ಯಾವ ಕಾರಣದಿಂದ ಅವರನ್ನು ಮುಖಂಡನೆಂದು ಹೇಳುತ್ತೀರಿ. ಜನರು ಹೇಳಿದರು: ಅವನು ನಮ್ಮ ಪೈಕಿ ಎಲ್ಲರಿಗಿಂತ ಐಶ್ವರ್ಯವಂತನಾಗಿದ್ದಾನೆ. ಆದರೆ ಅವನು ಬಹಳ ದೊಡ್ಡ ಜಿಪುಣನಾಗಿದ್ದಾನೆ. ಅದು ನಮಗೆ ಇಷ್ಟವಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಜಿಪುಣನಾಗುವುದು ದೊಡ್ಡ ರೋಗವಾಗಿದೆ. ಆ ಕಾರಣದಿಂದ ಅವನು ನಿಮ್ಮ ಮುಖಂಡನಾಗಲಾರ. ಆಗ ಜನರು ಹೇಳಿದರು: ನಮ್ಮ ಮುಖಂಡ ಯಾರಾಗಬೇಕೆಂದು ತಾವೇ ಹೇಳಿರಿ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಿಮ್ಮ ಮುಖಂಡ ಬಿಶರ್ ಬಿನ್ ಬರಾ ಬಿನ್ ಮಅ್‌ರೂರ್.

ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಔಸ್, ಖಝ್ರಜ್ ಗೋತ್ರಗಳ ವಿರುದ್ಧ ಹೋರಾಡುವಾಗ ಯಹೂದಿಯರು, ವಾಗ್ದಾನ ನೀಡಲ್ಪಟ್ಟ ಪ್ರವಾದಿಯ ಹೆಸರಿನಲ್ಲಿ ನಮಗೆ ಜಯ ನೀಡು ಎಂದು ಪ್ರಾರ್ಥಿಸುತ್ತಿದ್ದರು. ಆದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರವಾದಿಯಾಗಿ ನಿಯೋಜಿಸಲ್ಪಟ್ಟಾಗ ಯಹೂದಿಯರು ಅವರನ್ನು ನಿರಾಕರಿಸಿದರು. ಹಝ್ರತ್ ಮುಆಝ್ ಬಿನ್ ಜಬಲ್, ಹಝ್ರತ್ ಬಿಶರ್ ಬಿನ್ ಬರಾ ಮತ್ತು ದಾಊದ್ ಬಿನ್ ಸಲ್ಮಾ ಒಂದು ದಿನ ಯಹೂದಿಯರೊಂದಿಗೆ ಹೇಳಿದರು: ಓ ಯಹೂದಿಯರೇ, ನೀವು ಅಲ್ಲಾಹನಿಗೆ ಭಯಪಡಿರಿ ಹಾಗೂ ಇಸ್ಲಾಂ ಧರ್ಮ ಸ್ವೀಕರಿಸಿರಿ. ನೀವು ನಮ್ಮ ವಿರುದ್ಧ ಹೋರಾಡುವಾಗ ಮುಹಮ್ಮದ್ ಎಂಬ ಪ್ರವಾದಿಯ ಆವಿರ್ಭಾವ ಉಂಟಾಗಲಿ ಎಂದು ಹೇಳಿ ಅದರ ಮೂಲಕ ಜಯವನ್ನು ಬೇಡಿಕೊಳ್ಳುತ್ತಿದ್ದಿರಿ. ಈಗ ಅವರು ನಿಯೋಜಿಸಲ್ಪಟ್ಟಿದ್ದಾರೆ. ನೀವು ಆ ಪ್ರವಾದಿಯನ್ನು ಏಕೆ ನಂಬುವುದಿಲ್ಲ. ಆಗ ಯಹೂದಿಯನಾದ ಸಲಾಮ್ ಬಿನ್ ಮಶ್‌ಕಮ್ ಎಂಬ ಬನೂ ನಝೀರ್ ಗೋತ್ರದ ಮುಖಂಡ ಮತ್ತು ಅವರ ಖಜಾನೆಗಳ ಅಧಿಕಾರಿಯೂ ಆಗಿದ್ದ ವ್ಯಕ್ತಿ, ಝೈನಬ್ ಬಿನ್ತ್ ಹಾರಿಸ್ ಎಂಬ ಸ್ತ್ರೀಯ ಪತಿ – ಆಕೆ ಖೈಬರ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ವಿಷ ಹಾಕಿದ ಮಾಂಸದ ಪದಾರ್ಥ ನೀಡಿದ್ದಳು – ಹೇಳಿದನು: ಆ ಪ್ರವಾದಿ ನಮ್ಮ ಬಳಿಗೆ ನಾವು ಗುರುತಿಸುವಂತಹ ಏನನ್ನೂ ತಂದಿಲ್ಲ. ನಾವು ನಿಮ್ಮೊಂದಿಗೆ ಮೊದಲು ಯಾವ ಪ್ರವಾದಿಯ ಬಗ್ಗೆ ಪ್ರಸ್ತಾಪಿಸುತ್ತಿದ್ದೇವೋ ಆ ಪ್ರವಾದಿ ಈತನಲ್ಲ.

ಹಝ್ರತ್ ಕಅಬ್ ಬಿನ್ ಅಮರ್ ಅನ್‌ಸಾರಿ ಹೇಳುತ್ತಾರೆ: ಉಹುದ್ ಯುದ್ಧದ ಸಂದರ್ಭದಲ್ಲಿ ನಾನು ಮತ್ತು ನನ್ನ ಕೋಮಿನ 14 ಜನರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪವಿದ್ದೆವು. ಆಗ ನಮಗೆ ತೂಕಡಿಕೆ ಆವರಿಸಿತು. ಅದು ಒಂದು ರೀತಿಯ ನಿರ್ಭಯ ಸ್ಥಿತಿಯಾಗಿತ್ತು. ಎಂದರೆ ಬಹಳ ಮನಃಶಾಂತಿ ನೀಡುವ ತೂಕಡಿಕೆಯಾಗಿತ್ತು. ಯುದ್ಧದ ಸ್ಥಿತಿಯಲ್ಲಿದ್ದರೂ ನಮಗೆ ಎಂತಹ ಮನಃಶಾಂತಿ ದೊರಕಿತೆಂದರೆ ಗೊರಕೆ ಹೊಡೆಯದವರು ಯಾರೂ ಇರಲಿಲ್ಲ. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್, ಪವಿತ್ರ ಖುರ್‌ಆನ್‌ನಲ್ಲಿ **ಅಮನತನ್ ನುಆಸ** ಎಂದು ಬಳಸಲಾದ ಪದಗಳಿಗೆ ಇರುವ ವಿವಿಧ ಅರ್ಥಗಳ ಸಾರಾಂಶವಾಗಿ ಹೀಗೆ ಹೇಳುತ್ತಾರೆ: ದುಃಖದ ನಂತರ ನಿಮಗೆ ಎಂತಹ ನೆಮ್ಮದಿ ದೊರೆಯಿತೆಂದರೆ ಅದನ್ನು ನೀವು ನಿದ್ರಾವಸ್ಥೆ ಎಂದು ಹೇಳಬಹುದು ಅಥವಾ ಶಾಂತಿಯ ಸಂದರ್ಭದಲ್ಲಿನ ತೂಕಡಿಕೆ ಎಂದು. ಅಥವಾ ನಿಮಗೆ ಎಂತಹ ಶಾಂತಿ ಲಭಿಸಿತೆಂದರೆ ನೀವು ನಿದ್ರಿಸುವಂತಾಯಿತು. ಅಲ್ಲಾಹನು ಹೇಳುತ್ತಾನೆ: ನಾವು ನಿಮಗೆ ಎಂತಹ ನೆಮ್ಮದಿ ನೀಡಿದೆವು ಎಂದರೆ ನೀವು ಸುಖ ನಿದ್ರಿಸುವಂತೆ ಆದಿರಿ. ಆದರೆ ಅದು ನಿದ್ರೆಯ ಹಾಗೆ ಗಾಢವಾಗಿರಲಿಲ್ಲ. ನೀವು ನಿಮ್ಮ ಅಂಗಾಂಗಗಳ ಬಗ್ಗೆ ಪ್ರಜ್ಞೆ ಇಲ್ಲದವರಾಗಿರಲಿಲ್ಲ. ಆ ತೂಕಡಿಕೆ ನಿಮಗೆ ನೆಮ್ಮದಿ ನೀಡುತ್ತಿದ್ದರೂ ನೀವು ನಿಷ್ಕ್ರಿಯರಾಗಿರಲಿಲ್ಲ.

ಖೈಬರ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ನೀಡಲಾದ ವಿಷ ಹಾಕಲಾದ ಆಡಿನ ಮಾಂಸವನ್ನು ಹಝ್ರತ್ ಬಿಶರ್ ಸಹ ತಿಂದರು. ಆ ಮಾಂಸವನ್ನು ಒಬ್ಬ ಯಹೂದಿ ಸ್ತ್ರೀ ಪಾರಿತೋಷಿಕವಾಗಿ ಕಳುಹಿಸಿದ್ದಳು. ಹಝ್ರತ್ ಬಿಶರ್ ಮಾಂಸದ ತುಂಡು ನುಂಗಿದಾಗ ಅಲ್ಲಿಂದ ಏಳುವ ಮೊದಲೇ ಅವರ ಶರೀರದ ಬಣ್ಣ ಕಪ್ಪಾಯಿತು. ನೋವು ಅನುಭವವಾಯಿತು. ಒಂದು ವರ್ಷದ ಕಾಲ ಈ ಸ್ಥಿತಿಯಲ್ಲಿ ಅವರು ನೋವು ಅನುಭವಿಸಿದರು. ಅನ್ಯರ ಸಹಾಯವಿಲ್ಲದೆ ಮಗ್ಗಲು ಸಹ ಬದಲಾಯಿಸಲು ಸಾಧ್ಯವಾಗುತ್ತಿರಲಿಲ್ಲ. ಇದೇ ಸ್ಥಿತಿಯಲ್ಲಿ ಅವರು ಮೃತರಾದರು. ಇನ್ನೊಂದು ವರದಿ ಪ್ರಕಾರ

ಅವರು ಮಾಂಸ ತಿಂದು ಎದ್ದೇಳುವ ಮೊದಲೇ ಅಲ್ಲಿಯೇ ಮೃತರಾದರು ಎಂದು ಸಹ ಹೇಳಲ್ಪಡುತ್ತದೆ. ಹಝ್ರತ್ ಬಿಶರ್ ನಿಧನ ಹೊಂದಿದಾಗ ಅವರ ತಾಯಿಗೆ ಬಹಳ ದುಃಖವಾಯಿತು. ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ಹೇಳಿದರು: ಬಿಶರ್ ಮೃತನಾದ ಕಾರಣ ಬನೂ ಸಲ್ಮಾ ಕುಟುಂಬ ನಾಶವಾಗುವುದು. ಏನು, ಮೃತರು ಒಬ್ಬರಿನ್ನೊಬ್ಬರನ್ನು ಗುರುತಿಸುವರೇ? ಬಿಶರ್‌ನಿಗೆ ಸಲಾಮ್ ತಲಪಿಸಲು ಸಾಧ್ಯವಿದೆಯೇ? ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಹೌದು, ಯಾರ ಕೈಯಲ್ಲಿ ನನ್ನ ಜೀವವಿದೆಯೋ ಅವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ, ಪಕ್ಷಿಗಳು ಮರದಲ್ಲಿ ಒಂದು ಇನ್ನೊಂದನ್ನು ಪರಿಚಯಿಸುವ ಹಾಗೆ ಸ್ವರ್ಗದಲ್ಲಿ ವಾಸಿಸುವವರು ಪರಸ್ಪರ ಒಬ್ಬರಿನ್ನೊಬ್ಬರನ್ನು ಗುರುತಿಸುವರು. ಇನ್ನೊಂದು ವರದಿಯಲ್ಲಿ ಹೀಗೆ ಹೇಳಲಾಗಿದೆ: ಬನೂ ಸಲ್ಮಾ ಗೋತ್ರದ ಯಾರಾದರೂ ಮರಣಾಸನ್ನನಾಗಿದ್ದರೆ ಹಝ್ರತ್ ಬಿಶರ್‌ರ ತಾಯಿ ಆತನ ಬಳಿಗೆ ಹೋಗಿ ಹೇಳುತ್ತಿದ್ದರು: ನಿನ್ನ ಮೇಲೆ ಸಲಾಮ್ ಸುರಿಸಲ್ಪಡಲಿ. ಆಗ ಅವನು ಸಹ ಸಲಾಮ್ ಹೇಳುತ್ತಿದ್ದ. ಅನಂತರ ಆ ಮಹಿಳೆ ಹೇಳುತ್ತಿದ್ದರು: ಬಿಶರ್‌ನಿಗೆ ನನ್ನ ಸಲಾಮ್ ತಲಪಿಸಬೇಕು ಎಂದು. ಇನ್ನೊಂದು ವರದಿ ಹೀಗಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತನ್ನ ಕೊನೆಯ ರೋಗಾವಸ್ಥೆಯಲ್ಲಿದ್ದಾಗ ಅವರ ಬಳಿಗೆ ಹಝ್ರತ್ ಬಿಶರ್‌ರ ಸಹೋದರಿ ಹೋದರು. ಅವರೊಂದಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಿನ್ನ ಸಹೋದರನೊಂದಿಗೆ ನಾನು ತಿಂದ ತುತ್ತಿನ ಕಾರಣದಿಂದ ನನ್ನ ರಕ್ತನಾಳಗಳು ಕತ್ತರಿಸಲ್ಪಡುತ್ತಿರುವಂತೆ ಭಾಸವಾಗುತ್ತಿದೆ.

ಕೆಲವು ಶತ್ರುಗಳು ಆಕ್ಷೇಪಿಸುತ್ತಾರೆ, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೃತರಾದುದು ಈ ವಿಷ ಪ್ರಾಶನದ ಕಾರಣದಿಂದ ಎಂದು. ಚರಿತ್ರೆ ಮತ್ತು ಜೀವನ ಚರಿತ್ರೆಯ ಕೆಲವು ಗ್ರಂಥಗಳು ಸಹ ಈ ವಿಷಯವನ್ನು ಚರ್ಚಿಸಿವೆ. ಕೆಲವು ಜೀವನ ಚರಿತ್ರೆಗಾರರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಶಹಾದತ್ ಪದವಿ ನೀಡಲು ಈ ವರದಿಗಳನ್ನು ಅಂಗೀಕರಿಸಲು ಸಿದ್ಧರಾಗುತ್ತಾರೆ. ಆದರೆ ವಾಸ್ತವಿಕವಾಗಿ ಈ ವರದಿಗಳು ಸತ್ಯವಾದವುಗಳಲ್ಲ. ಇದಕ್ಕೆ ಸಂಬಂಧಿಸಿ ನಮ್ಮ ರೀಸರ್ಚ್ ಸೆಲ್‌ನವರು ಒಂದು ಟಿಪ್ಪಣಿ ನನಗೆ ಬರೆದು ಕಳುಹಿಸಿದ್ದರು. ಅವರು ಅದರಲ್ಲಿ ಹೀಗೆ ಬರೆಯುತ್ತಾರೆ: ಸೀರತ್ ಗ್ರಂಥಗಳಿಂದಲೂ ಹದೀಸುಗಳಿಂದಲೂ ಒಂದು ವಿಷಯ ಸ್ಪಷ್ಟವಾಗಿ ತಿಳಿಯುತ್ತದೆ. ಅದೇನೆಂದರೆ, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದುದು ಈ ವಿಷಪ್ರಾಶನದಿಂದ ಎನ್ನುವುದು ಖಂಡಿತವಾಗಿಯೂ ಸುಳ್ಳಾಗಿದೆ ಎಂದು. ಯಾರಾದರೂ ಹಾಗೆ ಸಂಭವಿಸಿತೆಂದು ಹೇಳುವುದಾದರೆ ಅವನು ಎಲ್ಲ ವರದಿಗಳನ್ನು ತಿಳಿದವನಾಗಿರುವುದಿಲ್ಲ ಅಥವಾ ಅವನು ತಪ್ಪು ಗ್ರಹಿಕೆಗೆ ಪಾತ್ರನಾಗಿದ್ದಾನೆ. ಸ್ಪಷ್ಟವಾಗಿ ತಿಳಿದಿರುವುದೇನೆಂದರೆ ವಿಷ ನೀಡಿದ ಸಂಭವ ಖೈಬರ್ ಯುದ್ಧದ ಕಾಲದಲ್ಲಾಗಿತ್ತು. ಅನಂತರ ಅಂದಾಜು ನಾಲ್ಕು ವರ್ಷಗಳ ಕಾಲ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಜೀವಿಸಿದ್ದರು. ಅವರು ಉತ್ತಮ ರೀತಿಯಲ್ಲಿ ಜೀವನ ನಡೆಸಿದ್ದರು. ಹಿಂದಿನ ಹಾಗೆ ಯುದ್ಧಕ್ಕೂ ಹೋಗುತ್ತಿದ್ದರು. ಇಬಾದತ್ ಮತ್ತು ಇತರ ಕರ್ಮಗಳಲ್ಲಿ ಸ್ವಲ್ಪ ಮಾತ್ರವೂ ವ್ಯತ್ಯಾಸ ತಲೆದೋರಲಿಲ್ಲ. ಅಂದಾಜು ನಾಲ್ಕು ವರ್ಷಗಳ ನಂತರ ಜ್ವರ ಮತ್ತು ತಲೆನೋವು ಉಂಟಾಗಿ ಅನಂತರ ಮೃತರಾದುದು ವಿಷಪ್ರಾಶನದ ಕಾರಣದಿಂದ ಎಂದು ಯಾವುದೇ ಬುದ್ಧಿಶಾಲಿ ಹೇಳಲಾರ.

ಇದಕ್ಕೆ ಸಂಬಂಧಿಸಿ ಮೇಲೆ ಉಲ್ಲೇಖಿಸಲಾದ ಹದೀಸಿನಲ್ಲಿ ಕೇವಲ ಒಂದು ನೋವಿನ ಬಗ್ಗೆ ಮಾತ್ರ ಪ್ರಸ್ತಾಪಿಸಲಾಗಿದೆ. ಕೆಲವು ಸಂದರ್ಭದಲ್ಲಿ ಶಾರೀರಿಕ ಕಷ್ಟ ಅಥವಾ ಗಾಯ ಅಥವಾ ರೋಗ ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಯಾವುದಾದರೂ ಕಾರಣದಿಂದ ಹೊರಗೆ ಬರುತ್ತದೆ. ಖೈಬರ್ ಸಂದರ್ಭದಲ್ಲಿ ನೀಡಲಾದ ವಿಷಭರಿತ ಮಾಂಸದ ಬಗ್ಗೆ ಸಹ ಅನೇಕ ವರದಿಗಳಿವೆ. ಒಂದು ವರದಿ ಪ್ರಕಾರ ಮಾಂಸವನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬಾಯಿಗೆ ಹಾಕಿದ್ದರೂ ಅದನ್ನು ನುಂಗಿರಲಿಲ್ಲ. ಒಂದು ವೇಳೆ ಅವರು ಅದನ್ನು ನುಂಗಿದ್ದರೂ ಅವರು ಸ್ವಸ್ಥವಾಗಿ ಅನಂತರ ಬದುಕಿದ್ದುದು ಸಾಬೀತುಪಡಿಸುವುನೇಂದರೆ ಅವರು ನಿಧನ ಹೊಂದಿರುವುದು ವಿಷಭರಿತ ಮಾಂಸ ತಿಂದ ಕಾರಣದಿಂದಲ್ಲ ಎಂದು. ಹದೀಸಿನಲ್ಲಿ ಇದರ ಬಗ್ಗೆ ಪೂರ್ಣ ವಿವರಣೆ ಇದೆ. ಅದರಲ್ಲಿ ಹೀಗೆ ಬರೆದಿದೆ– ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮಾಂಸದಲ್ಲಿ ವಿಷವಿದ್ದ ಬಗ್ಗೆ ತಿಳಿಯಿತು. ಅವರು ಸಹಾಬರನ್ನು ಆ ಮಾಂಸ ತಿನ್ನುವುದರಿಂದ ತಡೆದಿದ್ದರು. ವಿಷ ಹಾಕಿದ ಸ್ತ್ರೀಯನ್ನು ಕರೆದು ವಿಚಾರಿಸಿದಾಗ ಆಕೆ ಹೇಳಿದಳು: ನಾವು ವಿಷ ಹಾಕಿರುವುದು, ನೀವು ಅಲ್ಲಾಹನಿಂದ ನಿಯೋಜಿತರಾದ ಪ್ರವಾದಿ ಆಗಿದ್ದರೆ ರಕ್ಷಿಸಲ್ಪಡುವಿರಿ ಎಂದೂ ಇಲ್ಲವಾದರೆ ನಿಮ್ಮಿಂದ ನಾವು ರಕ್ಷಿಸಲ್ಪಡುವೆವು ಎಂಬ ಉದ್ದೇಶದಿಂದಾಗಿತ್ತು. ಯಹೂದಿಯರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರಕ್ಷಿಸಲ್ಪಟ್ಟ ಬಗ್ಗೆ ಪ್ರಕಟಿಸುತ್ತಿದ್ದಾರೆ, ಆ ಸ್ತ್ರೀ ಹೇಳಿದಳು ಅದು ಘೋರ ವಿಷವಾಗಿದ್ದರೂ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ರಕ್ಷಿಸಲ್ಪಟ್ಟರು ಎಂದು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆ ಸ್ತ್ರೀಯನ್ನು ಕ್ಷಮಿಸಿದ್ದರು. ಆ ಸ್ತ್ರೀ ನಂತರ ಮುಸ್ಲಿಮಳಾದಳು ಎಂಬ ವರದಿಗಳೂ ಇವೆ.

ಈಗ ಇಬ್ಬರು ನಿಧನ ಹೊಂದಿದವರ ಬಗ್ಗೆ ಪ್ರಸ್ತಾಪಿಸುವೆನು. ಅವರ ಜನಾಝ ಗಾಯಿಬ್ ಜುಮುಅ ನಮಾಝ್ ನಂತರ ನಿರ್ವಹಿಸುವೆನು. ಪ್ರಥಮ ಜನಾಝ ಮುಕರ್ರಮ್ ನಸೀರ್ ಅಹ್ಮದ್ ಸಾಹಿಬ್ (ಮುಕರ್ರಮ್ ಅಲಿ ಮುಹಮ್ಮದ್ ರಾಜನ್‌ಪುರದವರ ಪುತ್ರ). 2019 ನವೆಂಬರ್ ದಿನಾಂಕ 21ರಂದು 63ನೇ ವಯಸ್ಸಿನಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಎರಡನೆಯ ಜನಾಝ ಮುಕರ್ರಮ್ ಅತಾಉಲ್ ಕರೀಮ್ ಮುಬಶ್ಶಿರ್ ಸಾಹಿಬ್ ಇಬ್ನು ಮಿಯಾಂ ಅಲ್ಲಾ ದತ್ತಾ ಸಾಹಿಬ್. ಅವರು ಶೇಖ್‌ಪುರ ಜಿಲ್ಲೆಯ ಕಿರ್ತೂ ನಿವಾಸಿಯಾಗಿದ್ದು ಈಗ ಕೆನಡದಲ್ಲಿ ವಾಸಿಸುತ್ತಿದ್ದರು. ನವೆಂಬರ್ ದಿನಾಂಕ 13ರಂದು 75ನೇ ವಯಸ್ಸಿನಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.**

(ಹುಝೂರ್ ನಿಧನ ಹೊಂದಿದವರ ಮಗ್‌ಫಿರತ್ ಮತ್ತು ಅವರ ಪದವಿ ಉನ್ನತಗೊಳಿಸುವ ಬಗ್ಗೆ, ಅವರ ಮಕ್ಕಳಲ್ಲೂ ಸಂತಾನ ಪರಂಪರೆಯಲ್ಲೂ ಅವರ ಒಳಿತುಗಳನ್ನು ಜಾರಿಗೊಳಿಸುವ ಬಗ್ಗೆ ಪ್ರಾರ್ಥಿಸಿದರು.)

---------------*****---------------

اَلْحَمْدُ لِلّٰهِ نَحْمَدُهٗ وَ نَسْتَعِيْنُهٗ وَ نَسْتَغْفِرُهٗ وَنُؤْمِنُ بِهٖ وَنَتَوَكَّلُ
عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَ مِنْ سَيِّئَاتِ اَعْمَالِنَا مَنْ
يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَا هَادِيَ لَهٗ - وَنَشْهَدُ اَنْ لَّا
اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ- عِبَادَ اللّٰهِ رَحِمَكُمُ
اللّٰهُ اِنَّ اللّٰهَ يَاْمُرُ بِالْعَدْلِ وَ الْاِحْسَانِ وَ اِيْتَاءِ ذِي الْقُرْبٰى وَ يَنْهٰى
عَنِ الْفَحْشَاءِ وَ الْمُنْكَرِ وَ الْبَغْيِ يَعِظُكُمْ لَعَلَّكُمْ تَذَكَّرُوْنَ
اُذْكُرُوا اللّٰهَ يَذْكُرْكُمْ وَ ادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ-


***Friday Sermon delivered by Hadrath Khaleefatul Masih Al Khamis**(atba)*

*At, Masjid Baithul Futhuh, London, U.K. On 29-11-2019*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim |***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon